ಶ್ರೀ ಎಂ.ಟಿ.ಕೃಷ್ಣಪ್ಪ: ತೆಗೆದುಕೊಳ್ಳಿ ಸಾರ್. ಅದು 6(1) ಆದಮೇಲೆ ಅದು handover ತಾನೇ? 6(1) ಆಗಿದೆ ಸಾರ್. ತೆಗೆದುಕೊಂಡು ಕೆಲಸ ಮಾಡಬಹುದು. ಅದಕ್ಕೆ ಏನೂ ತೊಂದರೆಯಿಲ್ಲ ಸುರೇಶ್ ಕುಮಾರ್‌ರವರೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ

97(195) ಶ್ರೀ ಎಸ್. ಮುನಿರಾಜು (ದಾಸರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಯಾವ ಯಾವ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಈ) ಉಳಿದಿರುವ ಕೆರೆಗಳನ್ನು ಯಾವ ಅವಧಿಯಲ್ಲಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) 183

ಆ) ಹೌದು

ಇ) ಈ ಕೆಳಕಂಡಂತೆ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

1) ಬಿ.ಡಿ.ಎ ವತಿಯಿಂದ ಒಟ್ಟು 43 ಕೆರೆಗಳು

2) ಅರಣ್ಯ ಇಲಾಖೆ ವತಿಯಿಂದ ಒಟ್ಟು 5 ಕೆರೆಗಳು

3) ಕೆರೆ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 11 ಕೆರೆಗಳು

4) ಬಿ.ಬಿ.ಎಂ.ಪಿ. ವತಿಯಿಂದ 19 ಕೆರೆಗಳು

ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಈ) ಉಳಿದ ಕೆರೆಗಳನ್ನು ಹಂತ ಹಂತವಾಗಿ 2014–15ನೇ ಸಾಲಿನೊಳಗೆ ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 195ಕ್ಕೆ ಅನುಬಂಧ

ಬಿ.ಬಿ.ಎಂ.ಪಿ. ವತಿಯಿಂದ ಈ ಕೆಳಕಂಡ 19 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

1) ಅಲ್ಲಾಳಸಂದ್ರ ಕೆರೆ
2) ಯಲಹಂಕ ಕೆರೆ
3) ಕಲ್ಕೆರೆ ಕೆರೆ
4) ಅಟ್ಟೂರು ಕೆರೆ
5) ಕೌಡೇನಹಳ್ಳಿ ಕೆರೆ
6) ಚಿನ್ನಪ್ಪನಹಳ್ಳಿ ಕೆರೆ
7) ಕೈಕೊಂಡನಹಳ್ಳಿ ಕೆರೆ
8) ಅಂಬಲಿಪುರ ಕೆರೆ
9) ಉತ್ತರಹಳ್ಳಿ ಕೆರೆ
10) ಪುಟ್ಟೇನಹಳ್ಳಿ ಕೆರೆ
11) ದೊರೆಕೆರೆ
12) ದಾಸರಹಳ್ಳಿ ಕೆರೆ
13) ನಾಯಂಡನಹಳ್ಳಿ ಕೆರೆ
14) ಮಾಳಗಾಳ ಕೆರೆ
15) ದೀಪಾಂಜಲಿ ಕೆರೆ
16) ಕೊಡಿಗೆಹಳ್ಳಿ ಕೆರೆ
17) ಹೇರೋಹಳ್ಳಿ ಕೆರೆ
18) ದೊಡಬೊಮ್ಮಸಂದ್ರ ಕೆರೆ
19) ಅಂಬಲೀಪುರ ಮೇಲಿನ ಕೆರೆ

ಅರಣ್ಯ ಇಲಾಖೆಯ ವತಿಯಿಂದ ಈ ಕೆಳಕಂಡ 5 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

1) ಮಡಿವಾಳ ಕೆರೆ
2) ಪುಟ್ಟೇನಹಳ್ಳಿ ಕೆರೆ

3) ಹೆಣ್ಣೂರು ಕೆರೆ
4) ಜರಕಬಂದಾ ಕೆರೆ
5) ಮೈಲಸಂದ್ರ ಕೆರೆ

ಕೆರೆ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಕೆಳಕಂಡ 11 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ

1) ವೆಂಗಯ್ಯನಕೆರೆ
2) ನಾಗವಾರ ಕೆರೆ
3) ಜರಗನಹಳ್ಳಿ ಕೆರೆ
4) ಹೆಬ್ಬಾಳ ಕೆರೆ
5) ಅಗರಂ ಕೆರೆ
6) ಶೀಲವಂತಹ ಕೆರೆ
7) ಕುಂದಲಹಳ್ಳಿ ಕೆರೆ
8) ಮಹಾದೇವಪುರ ಕೆರೆ
9) ಚಳ್ಳಕೆರೆ ಕೆರೆ
10) ಕೆಳಗಿನಕೆರೆ ಬೈರಸಂದ್ರ ಕೆರೆ
11) ಬಾಚೇಕೆರೆ ಕೆರೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸುತ್ತಿರುವ ಕೆರೆಗಳ ಪಟ್ಟಿ

ಕ್ರ ಸಂ.	ಕೆರೆಗಳ ಹೆಸರು	ಹಂತ
1	ಮಲ್ಲತಹಳ್ಳಿ ಕೆರೆ	ಮುಕ್ತಾಯ ಹಂತದಲ್ಲಿದೆ
2	ಉಲ್ಲಾಳ ಕೆರೆ	ಮುಕ್ತಾಯ ಹಂತದಲ್ಲಿದೆ
3	ಕೊಮ್ಮಘಟ್ಟ ಕೆರೆ	ಮುಕ್ತಾಯ ಹಂತದಲ್ಲಿದೆ
4	ರಾಮಸಂದ್ರ ಕೆರೆ	ಮುಕ್ತಾಯ ಹಂತದಲ್ಲಿದೆ
5	ಕೊತ್ತನೂರು ಕೆರೆ	ಮುಕ್ತಾಯ ಹಂತದಲ್ಲಿದೆ
6	ಸೋಂಪುರ ಕೆರೆ	ಮುಕ್ತಾಯ ಹಂತದಲ್ಲಿದೆ
7	ತಲಘಟ್ಟಪುರ ಕೆರೆ	ಮುಕ್ತಾಯ ಹಂತದಲ್ಲಿದೆ
8	ಕೋನಸಂದ್ರ ಕೆರೆ	ಮುಕ್ತಾಯ ಹಂತದಲ್ಲಿದೆ
9	ರಾಚೇನಹಳ್ಳಿ ಕೆರೆ	ಮುಕ್ತಾಯ ಹಂತದಲ್ಲಿದೆ
10	ಜಕ್ಕೂರು–ಸಂಪಿಗೆಹಳ್ಳಿ ಕೆರೆ	ಮುಕ್ತಾಯ ಹಂತದಲ್ಲಿದೆ

11	ವೆಂಕಟೇಶಪುರ ಕೆರೆ	ಮುಗಿದಿದೆ
12	ದೊಡ್ಡಬಿದರಕಲ್ಲು ಕೆರೆ	ಕಾಮಗಾರಿ ಪ್ರಾರಂಭಗೊಂಡಿದೆ
13	ಮಂಗನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
14	ನೆಲಗದಿರೇನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
15	ನರಸಪ್ಪನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
16	ಲಿಂಗಧೀರನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
17	ಅಮೃತಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
18	ಗುಬ್ಬಲಾಲ ಕೆರೆ	ಯೋಜನಾ ಪರದಿ ತಯಾರಿಸಲಾಗುತ್ತಿದೆ
19	ಹೊಸಕೆರೆಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
20	ದೊಡ್ಡಕಲ್ಲಸಂದ್ರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
21	ಅವಲಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
22	ಹೊಸಕೆರೆ (ಗಾಂಧಿನಗರ)	ಯೋಜನಾ ವರದಿ ತಯಾರಿಸಲಾಗುತ್ತಿದೆ
23	ಚುಂಚನಘಟ್ಟ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
24	ಹುಲಿಮಾವು ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
25	ಅರಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
26	ಕೆಂಬೆತ್ತನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
27	ವಸಂತಪುರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
28	ಭೀಮನಕುಪ್ಪೆ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
29	ಕೆಂಚನಪುರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
30	ಕನ್ನೇನಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
31	ಚಿಕ್ಕಬಸ್ತಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
32	ಸೂಲಿಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
33	ಬಿ. ನಾರಾಯಣಪುರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
34	ಚಿಕ್ಕಬೆಟ್ಟಹಳ್ಳಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
35	ಗರವೆಬಾವಿಪಾಳ್ಯ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
36	ಸಿಂಗಸಂದ್ರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ

37	ಕೋಣನಕುಂಟೆ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
38	ಬೈರಸಂದ್ರ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
39	ಬಿ. ಚನ್ನಸಂದ್ರ ಕೆರೆ (ವಾರ್ಡ್ ನಂ. 57)	ಯೋಜನಾ ವರದಿ ತಯಾರಿಸಲಾಗುತ್ತಿದೆ
40	ಕಗ್ಗದಾಸಪುರ ಕೆರೆ (ವಾರ್ಡ್ ನಂ. 81)	ಯೋಜನಾ ವರದಿ ತಯಾರಿಸಲಾಗುತ್ತಿದೆ
41	ದೊಡ್ಡನೆಕ್ಕುಂದಿ ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
42	ಬೆಳ್ಳಂಡೂರು ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ
43	ವರ್ತೂರು ಕೆರೆ	ಯೋಜನಾ ವರದಿ ತಯಾರಿಸಲಾಗುತ್ತಿದೆ

ಶ್ರೀ ಎಸ್. ಮುನಿರಾಜು: ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 183 ಕೆರೆಗಳಿವೆ. ಅದರಲ್ಲಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 11 ಕೆರೆಗಳು ಬರುತ್ತದೆ. ಅದರಲ್ಲಿ ಒಂದು ಕೆರೆಯನ್ನು ಈಗಾಗಲೇ ಒಂಭತ್ತು ಕೋಟಿ 65 ಲಕ್ಷದಲ್ಲಿ ದಾಸರಹಳ್ಳಿ ಎನ್ನುವ ಒಂದು ಕೆರೆಯನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ನನ್ನ ಇಡೀ ಕ್ಷೇತ್ರ ಕೊಳವೆ ಬಾವಿ ಮೇಲೆ ಅವಲಂಬಿಸಿದೆ, ಕಾವೇರಿ ನೀರಿನ ಸಂಪರ್ಕ ಇಲ್ಲ. ಅದಕ್ಕಾಗಿ ಉಳಿದ ಇನ್ನು 10 ಕೆರೆಗಳು ಇವೆ. ಅದರಲ್ಲಿ ನಾಲ್ಕು ಕೆರೆಗಳನ್ನು ಈ ವರ್ಷದಲ್ಲಿ ಅಭಿವೃದ್ಧಿಗೆ ಕೈಗೆತ್ತಿಕೊಳ್ಳಬೇಕು ಎಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಒಂದೇ ಹಂತದಲ್ಲಿ 19 ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅದರಲ್ಲಿ ದಾಸರಹಳ್ಳಿಯದು ಕೂಡ ಸುಮಾರು 27 ಎಕರೆ 30 ಗುಂಟೆ ಇರುವ ಒಂದು ಕೆರೆ. ಇನ್ನು ಒಂದು ವರ್ಷದಲ್ಲಿ ಈ ಒಂದು ಕಾರ್ಯ ಮುಗಿಯುತ್ತದೆ. ಇದು ಸುಮಾರು ಒಂಭತ್ತೂವರೆ ಕೋಟಿ ರೂಪಾಯಿಗಳ ಪ್ರಾಜೆಕ್ಟ್. ಅದರಲ್ಲಿ ಒಂದು STP ಕೂಡ ನಾವು ಕಟ್ಟುತ್ತಿದ್ದೇವೆ.

ಇದುವರೆಗೂ 92 ಲಕ್ಷ ರೂಪಾಯಿ ಖರ್ಚಾಗಿದೆ. ಉಳಿದ ಕೆರೆಗಳನ್ನು ತಾವು ಏನು ಹೇಳಿದ್ದೀರಿ ಅದನ್ನು ಎರಡನೇ ಹಂತದಲ್ಲಿ ತೆಗೆದುಕೊಳ್ಳುತ್ತೇವೆ. ಮೊದಲನೆ ಹಂತದಲ್ಲಿ ಈ ಕೆರೆಯನ್ನು ತೆಗೆದುಕೊಂಡಿದ್ದೇವೆ. ಮುಂದಿನ ವರ್ಷದಲ್ಲಿ ಉಳಿದ ಕೆರೆಗಳನ್ನು ತೆಗೆದುಕೊಳ್ಳುತ್ತೇವೆ.